**Title for FB Kannada content : "Beru Naturals Founder: Bridging Tradition, Sustainability, and Agriculture"**

ಪಾರಂಪರಿಕ ಪದ್ಧತಿಯಲ್ಲಿ ಕಲ್ಲಿನ ಗಾಣ ಮತ್ತು ದೇಸಿ ಎತ್ತುಗಳ ಸಹಾಯದಿಂದ ಪರಿಶುದ್ಧ ಅಡುಗೆ ಎಣ್ಣೆ ತೆಗೆಯುತ್ತಿರುವ "ಬೇರು ನ್ಯಾಚುರಲ್ಸ್" ಸಂಸ್ಥಾಪಕರಾದ
ಶ್ರೀ ಹೇಮಂತ್ ಅವರ ಕುರಿತು ಬರೆದ ಲೇಖನ ಈ ವಾರದ ವಿಕ್ರಮದಲ್ಲಿ ಪ್ರಕಟವಾಗಿದೆ. ಆಸಕ್ತರು ಓದಿ ಇತತರೊಂದಿಗೆ ಹಂಚಿಕೊಳ್ಳಿ.
ಹೇಮಂತ್ ರವರ ಸಂಪರ್ಕಸಂಖ್ಯೆ +91 99645 86167
ವಿಕ್ರಮ ಪತ್ರಿಕೆ ಚಂದಾದಾರರಾಗಲು ಸಂಪರ್ಕಿಸಿ +91 8892923338
ಐದು ವರ್ಷಗಳ ಹಿಂದೆ ತಂಗಿಯ ಮದುವೆಯ ಖರ್ಚಿಗಾಗಿ ಹೊಲದಲ್ಲಿದ್ದ ಬೃಹತ್ ಗಾತ್ರದ ಬೇವಿನ ಮರಗಳನ್ನು ಕಡಿಸಿ ಮಾರಾಟ ಮಾಡುತ್ತಾರೆ ಹೇಮಂತ್. ಅದರ ಪ್ರಾಯಶ್ಚಿತ್ತಕ್ಕಾಗಿ ಮತ್ತೆ ಮರ ಗಿಡಗಳನ್ನು ಬೆಳೆಸಲು ಹೊರಟು ಇಂದು "ಬೇರು ನ್ಯಾಚುರಲ್ಸ್" ಎಂಬ ಸಾವಯವ ಉತ್ಪನ್ನಗಳನ್ನು ಮಾರಾಟ ಮಾಡುವ ಕಂಪನಿಯನ್ನು ಸ್ಥಾಪಿಸಿರುವ ಹೇಮಂತ್ ಅವರ ಬಗ್ಗೆ ತಿಳಿಯಲು ಪ್ರಯತ್ನಿಸೋಣ
ಮೂಲತಹ ಮೈಸೂರು ಜಿಲ್ಲೆಯ ಹುಣಸೂರು ತಾಲ್ಲೂಕಿನ ಉಯಿಗೌಡನಹಳ್ಳಿಯವರಾದ ಹೇಮಂತ್ ಅವರ ತಂದೆ ಕುಮಾರಸ್ವಾಮಿಯವರು ಮೈಸೂರಿನ ಖಾಸಗಿ ಕಂಪನಿಯೊಂದರಲ್ಲಿ ಲೆಕ್ಕಪತ್ರ ವಿಭಾಗದಲ್ಲಿ ಕೆಲಸ ಮಾಡುತ್ತಿರುತ್ತಾರೆ. ಹಳ್ಳಿಯ ಬೇರುಗಳಿದ್ದರೂ ತಂದೆ ಪಟ್ಟಣದಲ್ಲಿ ನೌಕರಿಯಲ್ಲಿದರಿಂದ ಹೇಮಂತ್ ರವರು ಹುಟ್ಟಿ ಬೆಳೆದದ್ದೆಲ್ಲಾ ಮೈಸೂರಿನಲ್ಲಿ. ಬೇಸಿಗೆ ಮತ್ತು ದಸರಾ ರಜೆಯಲ್ಲಿ ಮಾತ್ರ ಹಳ್ಳಿಗೆ ಬರುತ್ತಿದ್ದರು

ಮೈಸೂರಿನ ಪ್ರತಿಷ್ಠಿತ ವಿದ್ಯಾವರ್ಧಕ ಇಂಜಿನಿಯರಿಂಗ್ ಕಾಲೇಜಿನಲ್ಲಿ ಎಲೆಕ್ಟ್ರಾನಿಕ್ಸ್ ಇಂಜಿನಿಯರಿಂಗ್ ಪದವಿ ಪಡೆದು ಬೆಂಗಳೂರಿನ ಈಸ್ಟ್ ವೆಸ್ಟ್ ಕಾಲೇಜಿನಲ್ಲಿ ಮಾಸ್ಟರ್ಸ್ ಇನ್ ಡಿಜಿಟಲ್ ಎಲೆಕ್ಟ್ರಾನಿಕ್ಸ್ ಸ್ನಾತಕೋತ್ತರ ಪದವಿಯನ್ನು ಪಡೆಯುತ್ತಾರೆ.
ವ್ಯಾಸಂಗ ಮುಗಿದ ಕೂಡಲೇ ಬೆಂಗಳೂರಿನ ರಕ್ಷಣಾ ವಲಯಕ್ಕೆ ಸಂಬಂಧಪಟ್ಟಂತಹ ಒಂದು ಖಾಸಗಿ ಕಂಪನಿಯಲ್ಲಿ ಉದ್ಯೋಗ ದೊರೆಯುತ್ತದೆ.
ಕೆಲ ವರ್ಷಗಳು ಈ ಕಂಪನಿಯಲ್ಲಿ ದುಡಿದ ನಂತರ ಪ್ರಸ್ತುತ ಮೈಸೂರಿನ ಎಲ್ ಅಂಡ್ ಟಿ ಕಂಪನಿಯ ಉನ್ನತ ಹುದ್ದೆಯಲ್ಲಿ ಕಾರ್ಯನಿರ್ವಹಿಸುತ್ತಿದ್ದಾರೆ.
ತಂದೆಯವರು ಅಕಾಲ ಮರಣ ಹೊಂದಿದ ಮೇಲೆ ಮನೆಯ ಜವಾಬ್ದಾರಿ ಹೇಮಂತ್ ರವರ ಹೆಗಲೇರುತ್ತದೆ. 2016ರಲ್ಲಿ ತಂಗಿಯ ಮದುವೆ ನಿಶ್ಚಯವಾಗುತ್ತದೆ. ಉಳಿತಾಯ ಮತ್ತು ಪಿತ್ರಾರ್ಜಿತವಾಗಿ ಬಂದ ಹುಣಸೂರು ಸಮೀಪವಿರುವ ಆರು ಎಕರೆ ಮಳೆಯಾಶ್ರಿತ ಜಮೀನನ್ನು ಬಿಟ್ಟರೆ ಮತ್ತೇನು ಇರುವುದಿಲ್ಲ. ಮದುವೆಯ ಖರ್ಚನ್ನು ಹೇಗೆ ನಿಭಾಯಿಸುವುದೆಂದು ಆಲೋಚಿಸುತ್ತಿದ್ದಾಗ ತಮ್ಮ ಜಮೀನು ನೆನಪಾಗುತ್ತದೆ. ಮಳೆಯಾಶ್ರಿತ ಭೂಮಿಯಾದ್ದರಿಂದ ಹೇಮಂತ್ ರವರು ಸ್ವಯಂ ವ್ಯವಸಾಯ ಮಾಡುತ್ತಿರಲಿಲ್ಲ.

ಮೈಸೂರಿನ ಪ್ರತಿಷ್ಠಿತ ವಿದ್ಯಾವರ್ಧಕ ಇಂಜಿನಿಯರಿಂಗ್ ಕಾಲೇಜಿನಲ್ಲಿ ಎಲೆಕ್ಟ್ರಾನಿಕ್ಸ್ ಇಂಜಿನಿಯರಿಂಗ್ ಪದವಿ ಪಡೆದು ಬೆಂಗಳೂರಿನ ಈಸ್ಟ್ ವೆಸ್ಟ್ ಕಾಲೇಜಿನಲ್ಲಿ ಮಾಸ್ಟರ್ಸ್ ಇನ್ ಡಿಜಿಟಲ್ ಎಲೆಕ್ಟ್ರಾನಿಕ್ಸ್ ಸ್ನಾತಕೋತ್ತರ ಪದವಿಯನ್ನು ಪಡೆಯುತ್ತಾರೆ.
ವ್ಯಾಸಂಗ ಮುಗಿದ ಕೂಡಲೇ ಬೆಂಗಳೂರಿನ ರಕ್ಷಣಾ ವಲಯಕ್ಕೆ ಸಂಬಂಧಪಟ್ಟಂತಹ ಒಂದು ಖಾಸಗಿ ಕಂಪನಿಯಲ್ಲಿ ಉದ್ಯೋಗ ದೊರೆಯುತ್ತದೆ.
ಕೆಲ ವರ್ಷಗಳು ಈ ಕಂಪನಿಯಲ್ಲಿ ದುಡಿದ ನಂತರ ಪ್ರಸ್ತುತ ಮೈಸೂರಿನ ಎಲ್ ಅಂಡ್ ಟಿ ಕಂಪನಿಯ ಉನ್ನತ ಹುದ್ದೆಯಲ್ಲಿ ಕಾರ್ಯನಿರ್ವಹಿಸುತ್ತಿದ್ದಾರೆ.
ತಂದೆಯವರು ಅಕಾಲ ಮರಣ ಹೊಂದಿದ ಮೇಲೆ ಮನೆಯ ಜವಾಬ್ದಾರಿ ಹೇಮಂತ್ ರವರ ಹೆಗಲೇರುತ್ತದೆ. 2016ರಲ್ಲಿ ತಂಗಿಯ ಮದುವೆ ನಿಶ್ಚಯವಾಗುತ್ತದೆ. ಉಳಿತಾಯ ಮತ್ತು ಪಿತ್ರಾರ್ಜಿತವಾಗಿ ಬಂದ ಹುಣಸೂರು ಸಮೀಪವಿರುವ ಆರು ಎಕರೆ ಮಳೆಯಾಶ್ರಿತ ಜಮೀನನ್ನು ಬಿಟ್ಟರೆ ಮತ್ತೇನು ಇರುವುದಿಲ್ಲ.
ಮದುವೆಯ ಖರ್ಚನ್ನು ಹೇಗೆ ನಿಭಾಯಿಸುವುದೆಂದು ಆಲೋಚಿಸುತ್ತಿದ್ದಾಗ ತಮ್ಮ ಜಮೀನು ನೆನಪಾಗುತ್ತದೆ. ಮಳೆಯಾಶ್ರಿತ ಭೂಮಿಯಾದ್ದರಿಂದ ಹೇಮಂತ್ ರವರು ಸ್ವಯಂ ವ್ಯವಸಾಯ ಮಾಡುತ್ತಿರಲಿಲ್ಲ.

ಗುತ್ತಿಗೆ ಆಧಾರದ ಮೇಲೆ ಇತರ ರೈತರು ತಂಬಾಕನ್ನು ಬೆಳೆಯುತ್ತಿದ್ದರು.
ಜಮೀನಿನ ಬದುಗಳಲ್ಲಿ 35ಕ್ಕೂ ಹೆಚ್ಚು ದೊಡ್ಡ ಗಾತ್ರದ ಬೇವಿನ ಮರಗಳಿದ್ದವು.
ಈ ಮರಗಳನ್ನು ಕಡಿಸಿ ಮಾರಾಟ ಮಾಡಿ ತಂಗಿಯ ಮದುವೆ ಮಾಡಿದರು.
ಆದರೆ ಮರ ಕಡಿಸಿದ ಪಾಪಪ್ರಜ್ಞೆ ಹೇಮಂತ್ ರವರಿಗೆ ಕಾಡಲಾರಂಭಿಸಿತು.
ಊಟ ಮಾಡುವಾಗ ಮಲಗುವ ಸಮಯದಲ್ಲೂ ಹೇಮಂತ್ ಅವರಿಗೆ ಮರ ಕಡಿಸಿ ಮದುವೆ ಮಾಡಿದನೆಂಬ ಕೀಳರಿಮೆ ಉಂಟಾಗುತ್ತಿತ್ತು.
ಇದಕ್ಕೆ ಪ್ರಾಯಶ್ಚಿತ್ತವಾಗಲೆಂದು ತಮ್ಮ ಜಮೀನಿನಲ್ಲಿ ಕಿರು ಅರಣ್ಯ ನಿರ್ಮಿಸಬೇಕೆಂದು ನಿಶ್ಚಯಿಸಿದರು.
ಸಾಮಾಜಿಕ ಜಾಲತಾಣಗಳಲ್ಲಿ ಅರಣ್ಯ ಕೃಷಿಯ ಬಗ್ಗೆ ತಿಳಿಯಲು ಪ್ರಾರಂಭಿಸಿದರು. ಪ್ರಮುಖವಾಗಿ ನಾಡೋಜ ನಾರಾಯಣ ರೆಡ್ಡಿ ಅವರ ಮಾತುಗಳು ಬಹಳ ಪ್ರೇರಣೆ ನೀಡಿತು. ಮೊದಲಿಗೆ ರಾಸಾಯನಿಕಗಳನ್ನು ಬಳಸಿ ತಂಬಾಕು ಬೆಳೆಯುವುದನ್ನು ನಿಲ್ಲಿಸಿದರು. ಇದೇವೇಳೆಗೆ ಗೋಪಾಲ್ಸ್ ತಂಡದ ವತಿಯಿಂದ ಹುಣಸೂರಿನ ಚೌಡಿಕಟ್ಟೆಯ ದೇಶಿ ಗೋಶಾಲೆಯಲ್ಲಿ ಸಾವಯವ ಕೃಷಿಯ ಕುರಿತು ಒಂದು ದಿನದ ಕಾರ್ಯಗಾರದಲ್ಲಿ ಪಾಲ್ಗೊಳುತ್ತಾರೆ.
ಯೋಗ ಮತ್ತು ಸಾವಯವ ಕೃಷಿಯ ತಜ್ಞರಾದ ತಮ್ಮಯ್ಯನವರ ಮಾತುಗಳು ಹೇಮಂತ್ ಅವರಿಗೆ ಹಿಡಿಸುತ್ತದೆ.
ಕೂಡಲೇ ಅವರನ್ನು ತಮ್ಮ ತೋಟಕ್ಕೆ ಒಂದು ದಿನದ ಮಟ್ಟಿಗೆ ಕರೆತಂದು ಈ ಭೂಮಿಯಲ್ಲಿ ಹೇಗೆ ವ್ಯವಸಾಯ ಮಾಡಬೇಕೆಂದು ಸಲಹೆ ಕೇಳುತ್ತಾರೆ

ಗುತ್ತಿಗೆ ಆಧಾರದ ಮೇಲೆ ಇತರ ರೈತರು ತಂಬಾಕನ್ನು ಬೆಳೆಯುತ್ತಿದ್ದರು.
ಜಮೀನಿನ ಬದುಗಳಲ್ಲಿ 35ಕ್ಕೂ ಹೆಚ್ಚು ದೊಡ್ಡ ಗಾತ್ರದ ಬೇವಿನ ಮರಗಳಿದ್ದವು.
ಈ ಮರಗಳನ್ನು ಕಡಿಸಿ ಮಾರಾಟ ಮಾಡಿ ತಂಗಿಯ ಮದುವೆ ಮಾಡಿದರು.
ಆದರೆ ಮರ ಕಡಿಸಿದ ಪಾಪಪ್ರಜ್ಞೆ ಹೇಮಂತ್ ರವರಿಗೆ ಕಾಡಲಾರಂಭಿಸಿತು.
ಊಟ ಮಾಡುವಾಗ ಮಲಗುವ ಸಮಯದಲ್ಲೂ ಹೇಮಂತ್ ಅವರಿಗೆ ಮರ ಕಡಿಸಿ ಮದುವೆ ಮಾಡಿದನೆಂಬ ಕೀಳರಿಮೆ ಉಂಟಾಗುತ್ತಿತ್ತು.
ಇದಕ್ಕೆ ಪ್ರಾಯಶ್ಚಿತ್ತವಾಗಲೆಂದು ತಮ್ಮ ಜಮೀನಿನಲ್ಲಿ ಕಿರು ಅರಣ್ಯ ನಿರ್ಮಿಸಬೇಕೆಂದು ನಿಶ್ಚಯಿಸಿದರು.
ಸಾಮಾಜಿಕ ಜಾಲತಾಣಗಳಲ್ಲಿ ಅರಣ್ಯ ಕೃಷಿಯ ಬಗ್ಗೆ ತಿಳಿಯಲು ಪ್ರಾರಂಭಿಸಿದರು. ಪ್ರಮುಖವಾಗಿ ನಾಡೋಜ ನಾರಾಯಣ ರೆಡ್ಡಿ ಅವರ ಮಾತುಗಳು ಬಹಳ ಪ್ರೇರಣೆ ನೀಡಿತು. ಮೊದಲಿಗೆ ರಾಸಾಯನಿಕಗಳನ್ನು ಬಳಸಿ ತಂಬಾಕು ಬೆಳೆಯುವುದನ್ನು ನಿಲ್ಲಿಸಿದರು. ಇದೇವೇಳೆಗೆ ಗೋಪಾಲ್ಸ್ ತಂಡದ ವತಿಯಿಂದ ಹುಣಸೂರಿನ ಚೌಡಿಕಟ್ಟೆಯ ದೇಶಿ ಗೋಶಾಲೆಯಲ್ಲಿ ಸಾವಯವ ಕೃಷಿಯ ಕುರಿತು ಒಂದು ದಿನದ ಕಾರ್ಯಗಾರದಲ್ಲಿ ಪಾಲ್ಗೊಳುತ್ತಾರೆ.
ಯೋಗ ಮತ್ತು ಸಾವಯವ ಕೃಷಿಯ ತಜ್ಞರಾದ ತಮ್ಮಯ್ಯನವರ ಮಾತುಗಳು ಹೇಮಂತ್ ಅವರಿಗೆ ಹಿಡಿಸುತ್ತದೆ.
ಕೂಡಲೇ ಅವರನ್ನು ತಮ್ಮ ತೋಟಕ್ಕೆ ಒಂದು ದಿನದ ಮಟ್ಟಿಗೆ ಕರೆತಂದು ಈ ಭೂಮಿಯಲ್ಲಿ ಹೇಗೆ ವ್ಯವಸಾಯ ಮಾಡಬೇಕೆಂದು ಸಲಹೆ ಕೇಳುತ್ತಾರೆ

ಹೇಮಂತ್ ಅವರ ಜಮೀನು ಸಮತಟ್ಟಾಗಿರದೇ ಒಂದು ಕಡೆಗೆ ಇಳಿಜಾರಿದೆ. ಮಳೆ ಬಂದಾಗ ಮೇಲ್ಪದರರದ ಮಣ್ಣು ಕೊಚ್ಚಿಕೊಂಡು ಹೋಗುತ್ತಿತ್ತು. ಮೊದಲು ಇದನ್ನು ತಡೆಯಬೇಕೆಂದು ನಿಶ್ಚಯಿಸಿ ತಮ್ಮ ಭೂಮಿಯ ಅತಿ ಎತ್ತರದ ಪ್ರದೇಶದಲ್ಲಿ ಒಂದು 100*40 ಅಡಿ ಅಳತೆಯ ಕೃಷಿ ಹೊಂಡವನ್ನು ನಿರ್ಮಿಸುತ್ತಾರೆ.
ಈ ಹೊಂಡದಲ್ಲಿ ಸುತ್ತಮುತ್ತಲಿನ ಪ್ರದೇಶದಿಂದ ಹರಿದು ಬರುವ ನೀರು ಸಂಗ್ರಹವಾಗುತ್ತದೆ. ಈ ಪ್ರಯತ್ನದಿಂದ ಹೊರಗಿನಿಂದ ಬರುವ ನೀರನ್ನು ಭೂಮಿಗೆ ಇಂಗಿಸುವಲ್ಲಿ ಯಶಸ್ವಿಯಾಗುತ್ತಾರೆ. ಇಳಿಜಾರಿಗೆ ಅಡ್ಡಲಾಗಿ ಟ್ರೆಂಚ್ ಕಮ್ ಬಂಡ್ ಪದ್ಧತಿಯಲ್ಲಿ ಬದುಗಳ ನಿರ್ಮಾಣ ಮಾಡಿಸುತ್ತಾರೆ. ಮಳೆ ನೀರು ಮೊದಲು ಈ ಕಾಲುವೆಗಳಲ್ಲಿ ಶೇಖರಣೆಗೊಂಡು ಹೆಚ್ಚಾದ ನೀರಷ್ಟೇ ಮುಂದೆ ಹರಿಯುತ್ತದೆ. ಈ ಹಿಂದೆ ತಮ್ಮ ಪೂರ್ವಜರು ಹಲವು ಸಲ ಕೊಳವೆಬಾವಿಗಳನ್ನು ಕೊರೆಸಿ ವಿಫಲ ಪ್ರಯತ್ನ ಮಾಡಿದ್ದರು. ಈ ಬಾರಿ ಹೇಮಂತ್ ರವರು ಭೂವಿಜ್ಞಾನಿ ಒಬ್ಬರನ್ನು ಕರೆಸಿ ತಮ್ಮ ಜಮೀನಿನ ಕೆಳಭಾಗದಲ್ಲಿ ಕೊಳವೆ ಬಾವಿಯೊಂದನ್ನು ಕೊರೆಸುತ್ತಾರೆ. ಒಂದುವರೆ ಇಂಚು ನೀರು ದೊರೆಯುತ್ತದೆ.

ಹೇಮಂತ್ ಅವರ ಜಮೀನು ಸಮತಟ್ಟಾಗಿರದೇ ಒಂದು ಕಡೆಗೆ ಇಳಿಜಾರಿದೆ. ಮಳೆ ಬಂದಾಗ ಮೇಲ್ಪದರದ ಮಣ್ಣು ಕೊಚ್ಚಿಕೊಂಡು ಹೋಗುತ್ತಿತ್ತು. ಮೊದಲು ಇದನ್ನು ತಡೆಯಬೇಕೆಂದು ನಿಶ್ಚಯಿಸಿ ತಮ್ಮ ಭೂಮಿಯ ಅತಿ ಎತ್ತರದ ಪ್ರದೇಶದಲ್ಲಿ ಒಂದು 100*40 ಅಡಿ ಅಳತೆಯ ಕೃಷಿ ಹೊಂಡವನ್ನು ನಿರ್ಮಿಸುತ್ತಾರೆ.

ಈ ಹೊಂಡದಲ್ಲಿ ಸುತ್ತಮುತ್ತಲಿನ ಪ್ರದೇಶದಿಂದ ಹರಿದು ಬರುವ ನೀರು ಸಂಗ್ರಹವಾಗುತ್ತದೆ. ಈ ಪ್ರಯತ್ನದಿಂದ ಹೊರಗಿನಿಂದ ಬರುವ ನೀರನ್ನು ಭೂಮಿಗೆ ಇಂಗಿಸುವಲ್ಲಿ ಯಶಸ್ವಿಯಾಗುತ್ತಾರೆ. ಇಳಿಜಾರಿಗೆ ಅಡ್ಡಲಾಗಿ ಟ್ರೆಂಚ್ ಕಮ್ ಬಂಡ್ ಪದ್ಧತಿಯಲ್ಲಿ ಬದುಗಳ ನಿರ್ಮಾಣ ಮಾಡಿಸುತ್ತಾರೆ. ಮಳೆ ನೀರು ಮೊದಲು ಈ ಕಾಲುವೆಗಳಲ್ಲಿ ಶೇಖರಣೆಗೊಂಡು ಹೆಚ್ಚಾದ ನೀರಷ್ಟೇ ಮುಂದೆ ಹರಿಯುತ್ತದೆ. ಈ ಹಿಂದೆ ತಮ್ಮ ಪೂರ್ವಜರು ಹಲವು ಸಲ ಕೊಳವೆಬಾವಿಗಳನ್ನು ಕೊರೆಸಿ ವಿಫಲ ಪ್ರಯತ್ನ ಮಾಡಿದ್ದರು. ಈ ಬಾರಿ ಹೇಮಂತ್ ರವರು ಭೂವಿಜ್ಞಾನಿ ಒಬ್ಬರನ್ನು ಕರೆಸಿ ತಮ್ಮ ಜಮೀನಿನ ಕೆಳಭಾಗದಲ್ಲಿ ಕೊಳವೆ ಬಾವಿಯೊಂದನ್ನು ಕೊರೆಸುತ್ತಾರೆ. ಒಂದುವರೆ ಇಂಚು ನೀರು ದೊರೆಯುತ್ತದೆ.

ಅಂತರ್ಜಲ ಮಟ್ಟವನ್ನು ವೃದ್ಧಿಸಲು ಬೋರ್ ವೆಲ್ ರೀಚಾರ್ಜ್ ತಂತ್ರಜ್ಞಾನವನ್ನು ಬಳಸಿಕೊಂಡು ಕೊಳವೆ ಬಾವಿಯ ಸುತ್ತ ವೈಜ್ಞಾನಿಕ ರೀತಿಯಲ್ಲಿ ಮರಳು ಜಲ್ಲಿ ಮತ್ತಿತರ ವಸ್ತುಗಳನ್ನು ಉಪಯೋಗಿಸಿಕೊಂಡು ಇಂಗುಗುಂಡಿಯನ್ನು ನಿರ್ಮಿಸುತ್ತಾರೆ.
ಕೃಷಿ ಹೊಂಡ ಮತ್ತು ಕಾಲುವೆಗಳಲ್ಲಿ ನೀರಿನ ಮಟ್ಟ ಹೆಚ್ಚಾದರೆ ಕೊಳವೆ ಬಾವಿ ಸುತ್ತ ನಿರ್ಮಿಸಿರುವ ಇಂಗುಗುಂಡಿಗೆ ನೀರು ಬಂದು ಸೇರಲು ವ್ಯವಸ್ಥೆ ಮಾಡಿದ್ದಾರೆ.
ಒಂದು ವೇಳೆ ಅಧಿಕ ಮಳೆಯಿಂದ ಇಂಗುಗುಂಡಿಯೂ ಪೂರ್ಣಗೊಂಡು ನೀರು ಹೆಚ್ಚಾದರೆ ಅದನ್ನು ಸಂಗ್ರಹಿಸಲು ಮತ್ತೊಂದು ಕೃಷಿ ಹೊಂಡವನ್ನು ಕೃಷಿ ಇಲಾಖೆಯ ಸಹಾಯದಿಂದ ನಿರ್ಮಿಸಿದ್ದಾರೆ.
ಈ ಹೊಂಡಕ್ಕೆ ಕೃಷಿ ಇಲಾಖೆಯ ಅಧಿಕಾರಿಗಳ ಸಲಹೆಯಂತೆ ನೀರು ಬಸಿಯದಂತೆ ಟಾರ್ಪಲ್ ಅಳವಡಿಸಲಾಗಿದ್ದು ಇದರಲ್ಲಿ ಸಾವಿರಾರು ಮೀನುಗಳನ್ನು ಸಾಕುತ್ತಿದ್ದಾರೆ
ಹೊಸದಾಗಿ ಕೃಷಿಗೆ ಬರುವವರು ಮೊದಲು ಈ ರೀತಿ ನೀರಿನ ವ್ಯವಸ್ಥೆಯನ್ನು ಸರಿಪಡಿಸಿಕೊಂಡರೆ ಕೃಷಿಯಲ್ಲಿ ಅರ್ಧ ಗೆಲ್ಲಬಹುದೆಂದು ಹೇಮಂತ್ ರವರು ತಮ್ಮ ಅನುಭವ ಹಂಚಿಕೊಳ್ಳುತ್ತಾರೆ.
ಕೃಷಿ ಹೊಂಡ, ಬದುಗಳ ನಿರ್ಮಾಣ ಮತ್ತು ಬೋರ್ವೆಲ್ ಗಾಗಿ ಸಾಕಷ್ಟು ಹಣ ಖರ್ಚು ಮಾಡಿದ ನಂತರ ಒಂದುವರೆ ವರ್ಷ ಹೇಮಂತ್ ಅವರಿಗೆ ಮತ್ತೇನನ್ನು ಮಾಡಲು ಸಾಧ್ಯವಾಗುವುದಿಲ್ಲ.

ಅಂತರ್ಜಲ ಮಟ್ಟವನ್ನು ವೃದ್ಧಿಸಲು ಬೋರ್ ವೆಲ್ ರೀಚಾರ್ಜ್ ತಂತ್ರಜ್ಞಾನವನ್ನು ಬಳಸಿಕೊಂಡು ಕೊಳವೆ ಬಾವಿಯ ಸುತ್ತ ವೈಜ್ಞಾನಿಕ ರೀತಿಯಲ್ಲಿ ಮರಳು ಜಲ್ಲಿ ಮತ್ತಿತರ ವಸ್ತುಗಳನ್ನು ಉಪಯೋಗಿಸಿಕೊಂಡು ಇಂಗುಗುಂಡಿಯನ್ನು ನಿರ್ಮಿಸುತ್ತಾರೆ.

ಕೃಷಿ ಹೊಂಡ ಮತ್ತು ಕಾಲುವೆಗಳಲ್ಲಿ ನೀರಿನ ಮಟ್ಟ ಹೆಚ್ಚಾದರೆ ಕೊಳವೆ ಬಾವಿ ಸುತ್ತ ನಿರ್ಮಿಸಿರುವ ಇಂಗುಗುಂಡಿಗೆ ನೀರು ಬಂದು ಸೇರಲು ವ್ಯವಸ್ಥೆ ಮಾಡಿದ್ದಾರೆ.

ಒಂದು ವೇಳೆ ಅಧಿಕ ಮಳೆಯಿಂದ ಇಂಗುಗುಂಡಿಯೂ ಪೂರ್ಣಗೊಂಡು ನೀರು ಹೆಚ್ಚಾದರೆ ಅದನ್ನು ಸಂಗ್ರಹಿಸಲು ಮತ್ತೊಂದು ಕೃಷಿ ಹೊಂಡವನ್ನು ಕೃಷಿ ಇಲಾಖೆಯ ಸಹಾಯದಿಂದ ನಿರ್ಮಿಸಿದ್ದಾರೆ.

ಈ ಹೊಂಡಕ್ಕೆ ಕೃಷಿ ಇಲಾಖೆಯ ಅಧಿಕಾರಿಗಳ ಸಲಹೆಯಂತೆ ನೀರು ಬಸಿಯದಂತೆ ಟಾರ್ಪಲ್ ಅಳವಡಿಸಲಾಗಿದ್ದು ಇದರಲ್ಲಿ ಸಾವಿರಾರು ಮೀನುಗಳನ್ನು ಸಾಕುತ್ತಿದ್ದಾರೆ

ಹೊಸದಾಗಿ ಕೃಷಿಗೆ ಬರುವವರು ಮೊದಲು ಈ ರೀತಿ ನೀರಿನ ವ್ಯವಸ್ಥೆಯನ್ನು ಸರಿಪಡಿಸಿಕೊಂಡರೆ ಕೃಷಿಯಲ್ಲಿ ಅರ್ಧ ಗೆಲ್ಲಬಹುದೆಂದು ಹೇಮಂತ್ ರವರು ತಮ್ಮ ಅನುಭವ ಹಂಚಿಕೊಳ್ಳುತ್ತಾರೆ.

ಕೃಷಿ ಹೊಂಡ, ಬದುಗಳ ನಿರ್ಮಾಣ ಮತ್ತು ಬೋರ್ವೆಲ್ ಗಾಗಿ ಸಾಕಷ್ಟು ಹಣ ಖರ್ಚು ಮಾಡಿದ ನಂತರ ಒಂದುವರೆ ವರ್ಷ ಹೇಮಂತ್ ಅವರಿಗೆ ಮತ್ತೇನನ್ನು ಮಾಡಲು ಸಾಧ್ಯವಾಗುವುದಿಲ್ಲ.

ತಮ್ಮ ಕೆಲಸದ ಉಳಿತಾಯದ ಹಣ ಮತ್ತು ಪತ್ನಿಯ ಸಹಾಯದಿಂದ ವರ್ಷದ ನಂತರ ತಮ್ಮ ಜಮೀನಿಗೆ ಬೇಲಿಯನ್ನು ಹಾಕಿಸುತ್ತಾರೆ. ಇಷ್ಟರಲ್ಲಿ ಹೇಮಂತ್ ಅವರು ಹಲವು ಸಾವಯವ ಕೃಷಿಕರನ್ನು ಭೇಟಿಯಾಗಿರುತ್ತಾರೆ. ಸುಭಾಷ್ ಪಾಳೇಕರ್ ಅವರ ಪದ್ಧತಿಯಂತೆ ಬೇಲಿಯ ಸುತ್ತಲೂ ಕಾಡು ಜಾತಿಯ ಮರಗಳಾದ ಹೆಬ್ಬೇವು, ತೇಗ, ಹುಣಸೆ, ಬಸರಿ, ಆಲ ಮತ್ತು ಅನೇಕ ರೀತಿಯ ಹಣ್ಣಿನ ಗಿಡಗಳನ್ನು ನೆಡುತ್ತಾರೆ.
ಹೇಮಂತ್ ಅವರ ಈ ಕಾರ್ಯದಲ್ಲಿ ಅರಣ್ಯ ಇಲಾಖೆಯು ತನ್ನ ಸಹಾಯ ಹಸ್ತವನ್ನು ಚಾಚಿದೆ.
ಗಿಡಗಳನ್ನು ಉಚಿತವಾಗಿ ನೀಡಿದ್ದಲ್ಲದೆ ಪ್ರತಿವರ್ಷ ಹೇಮಂತ್ ಅವರ ಖಾತೆಗೆ ಇಂತಿಷ್ಟು ಸಹಾಯಧನ ಬಿಡುಗಡೆ ಮಾಡುತ್ತಿದೆ.
ಪ್ರಾರಂಭದಲ್ಲಿ ಯಾವ ದಿಕ್ಕಿಗೆ ಯಾವರೀತಿಯ ಮರಗಳನ್ನು ಹಾಕಬೇಕೆಂದು ಕಲ್ಪನೆ ಇಲ್ಲದಿದ್ದರೂ ನಂತರ ಅನುಭವದ ಪ್ರಕಾರ ಪಶ್ಚಿಮ ದಿಕ್ಕಿನಿಂದ ಹೆಚ್ಚಾಗಿ ಗಾಳಿ ಮತ್ತು ಬೆಳಕು ಬರುತ್ತಿದ್ದರಿಂದ ಅದನ್ನು ತಡೆಗಟ್ಟಲು ಪಶ್ಚಿಮ ಕಡೆಗೆ ದೊಡ್ಡದಾಗಿ ಬೆಳೆಯುವಂತಹ ಹುಣಸೆ, ಬೇವು, ಅರಳಿ ಸಸಿಗಳನ್ನು ಬೆಳೆಸುತ್ತಿದ್ದಾರೆ.
ಇದು ಗಾಳಿಯನ್ನು ತಡೆದು ಮಧ್ಯಾಹ್ನದ ಸೂರ್ಯನ ಪ್ರಖರವಾದ ಬೆಳಕನ್ನು ತಡೆಯುತ್ತದೆ.
ಬದುಗಳ ಮೇಲೆ ನಾಟಿ ತೆಂಗಿನ ಗಿಡಗಳನ್ನು ನೆಡುತ್ತಾರೆ.
ವಾರಾಂತ್ಯದಲ್ಲಿ ತಾವು ಬಂದು ಉಳಿಯಲು ಪುಟ್ಟದಾದ ಮನೆಯೊಂದನ್ನು ನಿರ್ಮಿಸಿದ್ದಾರೆ.
ಜೀವಾಮೃತ ತಯಾರಿಸಲು ಮೈಸೂರಿನ ಹೆಮ್ಮೆಯ ಹಳ್ಳಿಕಾರ್ ತಳಿಯ ಹಸುವೊಂದನ್ನು ಖರೀದಿಸುತ್ತಾರೆ. ತೋಟ ಮತ್ತು ಹಸುವಿನ ನಿರ್ವಹಣೆಗೆ ಸಹಾಯವಾಗಲೆಂದು ಒಂದು ಕಾರ್ಮಿಕ ಕುಟುಂಬವನ್ನು ತಮ್ಮ ಜಮೀನಿನಲ್ಲಿ ಉಳಿಸುವ ವ್ಯವಸ್ಥೆ ಆಗುತ್ತದೆ.
ಕೊಳವೆ ಬಾವಿಯ ನೀರನ್ನು ಸದುಪಯೋಗಪಡಿಸಿಕೊಳ್ಳಲೆಂದು ತೋಟಕ್ಕೆ ಹನಿ ನೀರಾವರಿ ವ್ಯವಸ್ಥೆ ಕಲ್ಪಿಸುತ್ತಾರೆ.

ತಮ್ಮ ಕೆಲಸದ ಉಳಿತಾಯದ ಹಣ ಮತ್ತು ಪತ್ನಿಯ ಸಹಾಯದಿಂದ ವರ್ಷದ ನಂತರ ತಮ್ಮ ಜಮೀನಿಗೆ ಬೇಲಿಯನ್ನು ಹಾಕಿಸುತ್ತಾರೆ.
ಇಷ್ಟರಲ್ಲಿ ಹೇಮಂತ್ ಅವರು ಹಲವು ಸಾವಯುವ ಕೃಷಿಕರನ್ನು ಭೇಟಿಯಾಗಿರುತ್ತಾರೆ. ಸುಭಾಷ್ ಪಾಳೇಕರ್ ಅವರ ಪದ್ಧತಿಯಂತೆ ಬೇಲಿಯ ಸುತ್ತಲೂ ಕಾಡು ಜಾತಿಯ ಮರಗಳಾದ ಹೆಬ್ಬೇವು, ತೇಗ, ಹುಣಸೆ, ಬಸರಿ, ಆಲ ಮತ್ತು ಅನೇಕ ರೀತಿಯ ಹಣ್ಣಿನ ಗಿಡಗಳನ್ನು ನೆಡುತ್ತಾರೆ.
ಹೇಮಂತ್ ಅವರ ಈ ಕಾರ್ಯದಲ್ಲಿ ಅರಣ್ಯ ಇಲಾಖೆಯು ತನ್ನ ಸಹಾಯ ಹಸ್ತವನ್ನು ಚಾಚಿದೆ.
ಗಿಡಗಳನ್ನು ಉಚಿತವಾಗಿ ನೀಡಿದ್ದಲ್ಲದೆ ಪ್ರತಿವರ್ಷ ಹೇಮಂತ್ ಅವರ ಖಾತೆಗೆ ಇಂತಿಷ್ಟು ಸಹಾಯಧನ ಬಿಡುಗಡೆ ಮಾಡುತ್ತಿದೆ.
ಪ್ರಾರಂಭದಲ್ಲಿ ಯಾವ ದಿಕ್ಕಿಗೆ ಯಾವರೀತಿಯ ಮರಗಳನ್ನು ಹಾಕಬೇಕೆಂದು ಕಲ್ಪನೆ ಇಲ್ಲದಿದ್ದರೂ ನಂತರ ಅನುಭವದ ಪ್ರಕಾರ ಪಶ್ಚಿಮ ದಿಕ್ಕಿನಿಂದ ಹೆಚ್ಚಾಗಿ ಗಾಳಿ ಮತ್ತು ಬೆಳಕು ಬರುತ್ತಿದ್ದರಿಂದ ಅದನ್ನು ತಡೆಗಟ್ಟಲು ಪಶ್ಚಿಮ ಕಡೆಗೆ ದೊಡ್ಡದಾಗಿ ಬೆಳೆಯುವಂತಹ ಹುಣಸೆ, ಬೇವು, ಅರಳಿ ಸಸಿಗಳನ್ನು ಬೆಳೆಸುತ್ತಿದ್ದಾರೆ.
ಇದು ಗಾಳಿಯನ್ನು ತಡೆದು ಮಧ್ಯಾಹ್ನದ ಸೂರ್ಯನ ಪ್ರಖರವಾದ ಬೆಳಕನ್ನು ತಡೆಯುತ್ತದೆ.
ಬದುಗಳ ಮೇಲೆ ನಾಟಿ ತೆಂಗಿನ ಗಿಡಗಳನ್ನು ನೆಡುತ್ತಾರೆ.
ವಾರಾಂತ್ಯದಲ್ಲಿ ತಾವು ಬಂದು ಉಳಿಯಲು ಪುಟ್ಟದಾದ ಮನೆಯೊಂದನ್ನು ನಿರ್ಮಿಸಿದ್ದಾರೆ.
ಜೀವಾಮೃತ ತಯಾರಿಸಲು ಮೈಸೂರಿನ ಹೆಮ್ಮೆಯ ಹಳ್ಳಿಕಾರ್ ತಳಿಯ ಹಸುವೊಂದನ್ನು ಖರೀದಿಸುತ್ತಾರೆ. ತೋಟ ಮತ್ತು ಹಸುವಿನ ನಿರ್ವಹಣೆಗೆ ಸಹಾಯವಾಗಲೆಂದು ಒಂದು ಕಾರ್ಮಿಕ ಕುಟುಂಬವನ್ನು ತಮ್ಮ ಜಮೀನಿನಲ್ಲಿ ಉಳಿಸುವ ವ್ಯವಸ್ಥೆ ಆಗುತ್ತದೆ.
ಕೊಳವೆ ಬಾವಿಯ ನೀರನ್ನು ಸದುಪಯೋಗಪಡಿಸಿಕೊಳ್ಳಲೆಂದು ತೋಟಕ್ಕೆ ಹನಿ ನೀರಾವರಿ ವ್ಯವಸ್ಥೆ ಕಲ್ಪಿಸುತ್ತಾರೆ.

ತೆಂಗಿನ ಸಸಿಗಳ ಬೆಳವಣಿಗೆಗೆ ನೆರವಾಗಲೆಂದು ತೋಟದಲ್ಲಿ ಬಾಳೆ ಕೃಷಿ ಪ್ರಾರಂಭಿಸುತ್ತಾರೆ. ಬಾಳೆಯನ್ನು ನೆಡುವಾಗ ಪಾಳೇಕರ್ ಅವರು ಸೂಚಿಸಿದಂತೆ ಘನ ಜೀವಾಮೃತವನ್ನು ತಯಾರಿಸಿ ಬಾಳೆಯ ಗುಂಡಿಗಳಿಗೆ ಹಾಕುತ್ತಾರೆ. ಉತ್ತಮ ಇಳುವರಿ ದೊರೆಯುತ್ತದಾರೂ ಮಾರುಕಟ್ಟೆಯಲ್ಲಿ ಸಾವಯವ ಕೃಷಿ ಮೂಲಕ ಬೆಳೆದ ರಾಸಾಯನಿಕ ಮುಕ್ತ ಬಾಳೆ ಎಂದು ಪರಿಗಣಿಸುವುದಿಲ್ಲ.
ಇದರಿಂದ ಮನನೊಂದ ಹೇಮಂತ್ ರವರು ಮೈಸೂರಿನ ತಮ್ಮ ಬಂಧು ಮಿತ್ರರಿಗೆ ಸಾವಯವ ಬಾಳೆ ಹಣ್ಣುಗಳನ್ನು ಮಾರಾಟ ಮಾಡಲು ಮುಂದಾಗುತ್ತಾರೆ.
ಮಂಡಿಯಲ್ಲಿ ₹20 ಕೇಳುವವರಿಲ್ಲದಿದ್ದರೂ ಮೈಸೂರಿನಲ್ಲಿ ಐವತ್ತು ರೂಪಾಯಿ ಕೊಟ್ಟು ಜನ ಮುಗಿಬಿದ್ದು ಕೊಂಡುಕೊಂಡರು.
ಹೀಗೆ ಹೇಮಂತ್ ರವರು ತಮ್ಮ ಉತ್ಪನ್ನಗಳನ್ನು ಮೊದಲ ಬಾರಿ ನೇರವಾಗಿ ಗ್ರಾಹಕರಿಗೆ ಮಾರಾಟ ಮಾಡುವಲ್ಲಿ ಯಶಸ್ವಿಯಾದರು.

ತೆಂಗಿನ ಸಸಿಗಳ ಬೆಳವಣಿಗೆಗೆ ನೆರವಾಗಲೆಂದು ತೋಟದಲ್ಲಿ ಬಾಳೆ ಕೃಷಿ ಪ್ರಾರಂಭಿಸುತ್ತಾರೆ. ಬಾಳೆಯನ್ನು ನೆಡುವಾಗ ಪಾಳೇಕರ್ ಅವರು ಸೂಚಿಸಿದಂತೆ ಘನ ಜೀವಾಮೃತವನ್ನು ತಯಾರಿಸಿ ಬಾಳೆಯ ಗುಂಡಿಗಳಿಗೆ ಹಾಕುತ್ತಾರೆ. ಉತ್ತಮ ಇಳುವರಿ ದೊರೆಯುತ್ತದಾರೂ ಮಾರುಕಟ್ಟೆಯಲ್ಲಿ ಸಾವಯವ ಕೃಷಿ ಮೂಲಕ ಬೆಳೆದ ರಾಸಾಯನಿಕ ಮುಕ್ತ ಬಾಳೆ ಎಂದು ಪರಿಗಣಿಸುವುದಿಲ್ಲ.
ಇದರಿಂದ ಮನನೊಂದ ಹೇಮಂತ್ ರವರು ಮೈಸೂರಿನ ತಮ್ಮ ಬಂಧು ಮಿತ್ರರಿಗೆ ಸಾವಯವ ಬಾಳೆ ಹಣ್ಣುಗಳನ್ನು ಮಾರಾಟ ಮಾಡಲು ಮುಂದಾಗುತ್ತಾರೆ.
ಮಂಡಿಯಲ್ಲಿ ₹20 ಕೇಳುವವರಿಲ್ಲದಿದ್ದರೂ ಮೈಸೂರಿನಲ್ಲಿ ಐವತ್ತು ರೂಪಾಯಿ ಕೊಟ್ಟು ಜನ ಮುಗಿಬಿದ್ದು ಕೊಂಡುಕೊಂಡರು.
ಹೀಗೆ ಹೇಮಂತ್ ರವರು ತಮ್ಮ ಉತ್ಪನ್ನಗಳನ್ನು ಮೊದಲ ಬಾರಿ ನೇರವಾಗಿ ಗ್ರಾಹಕರಿಗೆ ಮಾರಾಟ ಮಾಡುವಲ್ಲಿ ಯಶಸ್ವಿಯಾದರು.

ಮುಂದೆ ಮಳೆಗಾಲದಲ್ಲಿ ತೊಗರಿ, ಉದ್ದು, ಹೆಸರು, ಅಲಸಂದೆ, ನೆಲಗಡಲೆ, ರಾಗಿ ಸೇರಿದಂತೆ ಹಲವು ಬೆಳೆಗಳನ್ನು ಅಕ್ಕಡಿ ಪದ್ಧತಿಯಲ್ಲಿ ಬೆಳೆಯುತ್ತಾರೆ. ಸುತ್ತಮುತ್ತಲ ರೈತರು ತೊಗರಿ ಹೂವುಬಿಡುವಾಗ ನೀವು ರಾಸಾಯನಿಕಗಳನ್ನು ಸಿಂಪಡಿಸದಿದ್ದರೆ ಒಂದೇಒಂದು ಕಾಳು ಸಿಗುವುದಿಲ್ಲವೆಂದು ಅಭಿಪ್ರಾಯ ವ್ಯಕ್ತಪಡಿಸುತ್ತಾರೆ. ಆದರೆ ಯಾವ ಸಲಹೆಗಳಿಗೂ ಕಿವಿಗೊಡದೆ ಅಗ್ನಿಅಸ್ತ್ರವನ್ನು ತಯಾರಿಸಿ ಇನ್ನೇನು ಹೂವು ಬಿಡಲು ಪ್ರಾರಂಭಿಸುವಾಗ ಸಿಂಪಡಿಸುತ್ತಾರೆ. ಆಶ್ಚರ್ಯವೆಂಬಂತೆ ಹುಳುವಿನ ಬಾಧೆಗಳಿಲ್ಲದೆ ಉತ್ಕೃಷ್ಟ ಗುಣಮಟ್ಟದ ಕಾಳುಗಳು ದೊರೆಯುತ್ತದೆ. ತಮ್ಮ ಮನೆಗೆ ಎಷ್ಟು ಬೇಕೋ ಅಷ್ಟನ್ನು ಉಳಿಸಿಕೊಂಡು ಮಿಕ್ಕಿದ್ದನ್ನು ಬಂಧುಮಿತ್ರರಿಗೆ ಪುನಹ ಮಾರಾಟ ಮಾಡುತ್ತಾರೆ. ಮತ್ತೊಮ್ಮೆ ಎಲ್ಲಾ ಗ್ರಾಹಕರು ಉತ್ತಮ ಪ್ರತಿಕ್ರಿಯೆ ನೀಡುತ್ತಾರೆ.

ಮುಂದಿನ ವರ್ಷ ಹೇಮಂತ್ ರವರು ಕಾಳುಗಳ ಜೊತೆಯಲ್ಲಿ 1ಎಕರೆಯಲ್ಲಿ “ಶ್ರೀ” ಪದ್ಧತಿ ಅಳವಡಿಸಿಕೊಂಡು ಭತ್ತವನ್ನು ಬೆಳೆಯುತ್ತಾರೆ.

ಸಹಜ ಸಮೃದ್ಧ ಸಂಸ್ಥೆಯವರಿಂದ ಸಿದ್ಧ ಸಣ್ಣ ಎಂಬ ದೇಸಿ ಭತ್ತದ ತಳಿಯನ್ನು ಖರೀದಿಸಿ ಶ್ರೀ ಪದ್ಧತಿಯಲ್ಲಿ ಅಲ್ಪ ಪ್ರಮಾಣದ ನೀರನ್ನು ಬಳಸಿ ಭತ್ತವನ್ನು ಬೆಳೆಯುತ್ತಾರೆ. ಈ ಪ್ರಯೋಗದಲ್ಲೂ ಯಶಸ್ವಿಯಾಗುತ್ತಾರೆ ಹೇಮಂತ್.

ಇದೇ ವೇಳೆ ತೋಟದ ಇನ್ನೊಂದು ಭಾಗದಲ್ಲಿ ನೆಲಗಡಲೆಯ ಉತ್ತಮ ಇಳುವರಿ ದೊರಕಿರುತ್ತದೆ. ನೆಲಗಡಲೆಯನ್ನು ಹಾಗೆ ಮಾರಾಟ ಮಾಡದೆ ಮೌಲ್ಯವರ್ಧನೆಗೊಳಿಸಿ 'ಪೀನಟ್ ಬಟರ್' ಎಂಬ ಉತ್ಪನ್ನವನ್ನು ಗ್ರಾಹಕರಿಗೆ ಪರಿಚಯಿಸುತ್ತಾರೆ.
ಇಷ್ಟರಲ್ಲಿ ತೋಟದ ನಿರ್ವಹಣೆಗೆಂದು ತಂದ ನಾಟಿ ಹಸುಗಳು ಗಂಡು ಕರುಗಳಿಗೆ ಜನ್ಮ ನೀಡಿರುತ್ತದೆ ಇವುಗಳನ್ನು ಬಳಸಿಕೊಂಡು ಏನನ್ನಾದರೂ ಮಾಡಬೇಕೆಂದು ಆಲೋಚಿಸುತ್ತಿದ್ದಾಗ, ಫೆಬ್ರವರಿ 2021ರಲ್ಲಿ ಕೆಆರ್ ನಗರ ಸಮೀಪದ ದೇಸಿರಿ ನ್ಯಾಚುರಲ್ಸ್ ಸಂಸ್ಥೆಯವರು ಎತ್ತಿನ ಗಾಣದಿಂದ ಎಣ್ಣೆಯನ್ನು ಉತ್ಪಾದಿಸುವ ಕುರಿತು ಒಂದು ದಿನದ ಕಾರ್ಯಾಗಾರ ಆಯೋಜಿಸಿರುವುದು ತಿಳಿಯುತ್ತದೆ.
ಕಾಕತಾಳಿಯವಂತೆ ಈ ಕಾರ್ಯಗಾರದಲ್ಲಿ ಅತಿಥಿಗಳಾಗಿ ನಾನು ಮತ್ತು ಪತ್ನಿ ಸುಧಾ ಭಾಗವಹಿಸಿರುತ್ತೇವೆ.
ಅನೇಕ ಹೊಸ ವಿಚಾರಗಳನ್ನು ತಿಳಿದುಕೊಂಡು ತಮ್ಮ ತೋಟದಲ್ಲಿ ಎತ್ತಿನ ಗಾಣ ನಿರ್ಮಿಸಬೇಕೆಂದು ತೀರ್ಮಾನಿಸುತ್ತಾರೆ.
ಪಾರಂಪರಿಕ ಪದ್ಧತಿಯಲ್ಲಿ ಗಾಣದಿಂದ ಎಣ್ಣೆಯನ್ನು ತೆಗೆಯುವ ವಿಧಾನವನ್ನು ತಿಳಿಯಲು ಮತ್ತಷ್ಟು ಅಧ್ಯಯನವನ್ನು ಕೈಗೊಳ್ಳುತ್ತಾರೆ.
ತಮಿಳುನಾಡಿನ ಹಲವು ಪ್ರದೇಶಗಳಿಗೆ ಭೇಟಿ ಕೊಟ್ಟು ಯಾವ ರೀತಿ ಎಣ್ಣೆಯನ್ನು ತೆಗೆಯಬೇಕೆಂದು ತಿಳಿದುಕೊಳ್ಳುತ್ತಾರೆ.
ಈ ಅಧ್ಯಯನದಲ್ಲಿ ಮರದ ಗಾಣಕ್ಕಿಂತ ಕಲ್ಲಿನ ಗಾಣ ಸೂಕ್ತವೆನಿಸುತ್ತದೆ.
ಮರದ ಗಾಣದಲ್ಲಿ ಒಂದು ಸಲಕ್ಕೆ 12 ಕೆಜಿ ಬೀಜಗಳನ್ನು ಹಾಕಬಹುದು. ಅದೇ ಕಲ್ಲಿನ ಗಾಣದಲ್ಲಿ 20 ಕೆಜಿ ಹಿಡಿಸುತ್ತದೆ.
ಇನ್ನು ಕಲ್ಲಿನ ಗಾಣ ಮರದ ಗಾಣದ ರೀತಿ ಯಾವುದೇ ನಿರ್ವಹಣೆಯನ್ನು ನಿರೀಕ್ಷಿಸುವುದಿಲ್ಲ.

ಕೂಡಲೇ ತಮಿಳುನಾಡಿನಿಂದ ಒಂದು ಕಲ್ಲಿನ ಗಾಣವನ್ನು ಕೊಂಡುಕೊಂಡು ತಮ್ಮ ತೋಟದಲ್ಲಿ ಅಳವಡಿಸಿಕೊಳ್ಳುತ್ತಾರೆ.
ಮೇಲ್ಭಾಗದ ಗುಂಡು ಮತ್ತು ಗಾಣವನ್ನು ತಿರುಗಿಸಲು ಸಹಾಯಮಾಡುವ ಪಟ್ಟಿ ಬಾಗೆ ಮರದ್ದಾಗಿರುತ್ತದೆ.
ಸುಲಭವಾಗಿ ಗುಂಡನ್ನು ಕೆಳಗಿಳಿಸಲು ಚೈನ್ ಪುಲ್ಲಿ ಸಿಸ್ಟಮನ್ನು ಅಳವಡಿಸಿಕೊಳ್ಳುತ್ತಾರೆ
ಇದರಿಂದ ಹೆಂಗಸರು ಸಹ ಸುಲಭವಾಗಿ ಭಾರವಾದ ಗುಂಡನ್ನು ಕೆಳಗಿಳಿಸಬಹುದಾಗಿದೆ
ತಮ್ಮಲ್ಲಿದ್ದ ಎತ್ತುಗಳಲ್ಲದೆ ಸ್ಥಳೀಯವಾಗಿಯೂ ಎರಡು ಜೊತೆ ಹ/vಳ್ಳಿಕಾರ್ ದನಗಳನ್ನು ಖರೀದಿಸಿ ಗಾಣದಲ್ಲಿ ಎಣ್ಣೆ ತೆಗೆಯಲು ಬಳಸುತ್ತಿದ್ದಾರೆ.
ಎಣ್ಣೆ ಕಾಳುಗಳಲ್ಲಿ ಅಲ್ಪಪ್ರಮಾಣದ ತೇವಾಂಶವಿರುತ್ತದೆ ಮತ್ತು ಕೆಲವೊಂದು ಸಲ ಎಣ್ಣೆಯನ್ನು ತೆಗೆಯಲು ನೀರನ್ನು ಮಿಶ್ರಣ ಮಾಡಬೇಕಾಗುತ್ತದೆ ಇಂತಹ ಸಂದರ್ಭಗಳಲ್ಲಿ ಎಣ್ಣೆಯಲ್ಲಿ ತೇವಾಂಶವಿದ್ದರೆ ಎಣ್ಣೆ ಬಹುಬೇಗ ಹಾಳಾಗುತ್ತದೆ. ಇದನ್ನು ತಡೆಗಟ್ಟಲು ಎಣ್ಣೆಯನ್ನು ಬಿಸಿಲಿನಲ್ಲಿ ಒಣಗಿಸಬೇಕಾಗುತ್ತದೆ.
ಮಳೆಗಾಲದಲ್ಲಿ ಈ ರೀತಿ ಎಣ್ಣೆಯನ್ನು ಒದಗಿಸುವುದು ಬಹಳ ಕಷ್ಟ
ಮತ್ತು ತೆರೆದ ಜಾಗದಲ್ಲಿ ಒದಗಿಸುವುದರಿಂದ ಮತ್ತಿತರ ಪದಾರ್ಥಗಳು ಸೇರುವ ಅಪಾಯವಿದೆ.
ಹಾಗಾಗಿ ಹೇಮಂತ್ ರವರು ಗಾಣದ ಸಮೀಪವೇ ಸೋಲಾರ್ ಡ್ರೈಯರ್ ಒಂದನ್ನು ನಿರ್ಮಾಣ ಮಾಡಿದ್ದಾರೆ.

ಇದರಲ್ಲಿ ನಾಲ್ಕೈದು ದಿನಗಳು ಎಣ್ಣೆಯನ್ನು ತೆರೆದಿಟ್ಟರೆ ತೇವಾಂಶ ಆವಿಯಾಗುವ ಜೊತೆಯಲ್ಲಿ ಎಣ್ಣೆಯಲ್ಲಿನಗಸಿ ಪಾತ್ರೆಯ ಕೆಳಭಾಗದಲ್ಲಿ ಶೇಖರಣೆ ಗೊಂಡಿರುತ್ತದೆ.
ಹೇಮಂತ್ ಅವರು ಎಣ್ಣೆಯನ್ನು ಸಂಗ್ರಹಿಸಲು 30 ಲೀಟರ್ ಸಾಮರ್ಥ್ಯದ ಸ್ಟೀಲ್ ಕಂಟೇನರ್ ಗಳನ್ನು ಬಳಸುತ್ತಿದ್ದಾರೆ ಇವುಗಳಿಗೆ ವಿಶೇಷವಾಗಿ ತಳಮಟ್ಟದಿಂದ ಅರ್ಧ ಅಡಿ ಮೇಲುಗಡೆ ಒಂದು ನಳಿಕೆಯನ್ನು ಅಳವಡಿಸಿದ್ದಾರೆ. ಗಸಿ ಎಲ್ಲಾ ಕೆಳಭಾಗದಲ್ಲಿ ಸಂಗ್ರಹಗೊಂಡು ಶುದ್ಧವಾದ ಎಣ್ಣೆ ನಳದಿಂದ ಆಚೆ ಬರುತ್ತದೆ. ಈ ಎಣ್ಣೆಯನ್ನು ಪ್ಲಾಸ್ಟಿಕ್ ಬಳಸದೆ ಟಿನ್ ಕಂಟೇನರ್ ಗಳಲ್ಲಿ ತುಂಬಿಸಿ ಸೀಲ್ ಮಾಡಲಾಗುತ್ತದೆ. ಒಮ್ಮೆ ಸೀಲ್ ಮಾಡಿದರೆ ಕೇವಲ ಗ್ರಾಹಕರಷ್ಟೇ ಅದನ್ನು ತೆರೆಯಬಹುದಾಗಿದೆ.
ಸೀಲ್ ತೆಗೆದ ನಂತರ ಮತ್ತೆ ಹಾಕಲು ಸಾಧ್ಯವಿಲ್ಲ.
ಈ ರೀತಿ ಗಾಣದಿಂದ ಗ್ರಾಹಕರವರೆಗೆ ಎಣ್ಣೆ ತಲುಪಿಸಲು ಸೂಕ್ತ ಕ್ರಮವನ್ನು ಕೈಗೊಂಡಿರುತ್ತಾರೆ.
ಇತ್ತ ತೋಟದಲ್ಲಿ ಎಣ್ಣೆ ಗಾಣದ ಘಟಕವನ್ನು ಸ್ಥಾಪಿಸಿದರೆ ಮತ್ತೊಂದು ಕಡೆ ತಮ್ಮ ಬಾಲ್ಯದ ಗೆಳೆಯರಾದ ಮಂಜೇಶ್ ಮತ್ತು ರವಿಕುಮಾರ್ ಅವರ ಜೊತೆಯಲ್ಲಿ ಬೇರು ನ್ಯಾಚುರಲ್ಸ್ ಎಂಬ ಸಂಸ್ಥೆಯನ್ನು ಸ್ಥಾಪಿಸುತ್ತಾರೆ.

ಹೇಮಂತ್ ರಂತೆಯೇ ಮಂಜೇಶ್ ಮತ್ತು ರವಿಕುಮಾರ್ ಅವರುಗಳಿಗೆ ಕೃಷಿಭೂಮಿ ಇದ್ದು ಪ್ರಾರಂಭದಲ್ಲಿ ತಮ್ಮ ಭೂಮಿಯಲ್ಲಿ ಬೆಳೆಯುತ್ತಿದ್ದ ಉತ್ಪನ್ನಗಳನ್ನು ಮಾರಾಟ ಮಾಡಲು ಬೇರು ನ್ಯಾಚುರಲ್ ಸಂಸ್ಥೆ ಸ್ಥಾಪಿಸಿದ ಇವರುಗಳು ಇಂದು ಮೈಸೂರಿನ ಕುವೆಂಪು ನಗರದ ಮುಖ್ಯರಸ್ತೆಯಲ್ಲಿ ಸಾವಯವ ಮಳಿಗೆಯನ್ನು ಸ್ಥಾಪಿಸಿದ್ದಾರೆ.
ದಿನಬಳಕೆ ವಸ್ತುಗಳಾದ ಅಕ್ಕಿ, ಬೇಳೆ ಕಾಳುಗಳು ಬೆಲ್ಲ, ಎಣ್ಣೆ , ಸಿರಿಧಾನ್ಯಗಳು ಸೇರಿದಂತೆ ನೂರಾರು ಉತ್ಪನ್ನಗಳನ್ನು ಇಲ್ಲಿ ಮಾರಾಟ ಮಾಡಲಾಗುತ್ತಿದೆ.
ಗ್ರಾಹಕರು ಬಯಸಿದರೆ ಮೈಸೂರು ನಗರದಲ್ಲಿ ಹೋಂ ಡೆಲಿವರಿ ಕೊಡುತ್ತಾರೆ.
ಅಂಗಡಿಯಲ್ಲಿ ಅಷ್ಟೇ ಅಲ್ಲದೆ ಆನ್ಲೈನ್ ಮುಖಾಂತರವು ಬೇರು ನ್ಯಾಚುರಲ್ಸ್ ನ ಉತ್ಪನ್ನಗಳನ್ನು ಖರೀದಿಸಬಹುದಾಗಿದೆ.
ತಾವೊಬ್ಬರೇ ಬೆಳೆಯದೆ ಇತರರಿಗೂ ಸಹಾಯವಾಗಲೆಂದು ತಮ್ಮ ತೋಟಕ್ಕೆ ಭೇಟಿ ಕೊಡಲು ಎಲ್ಲರಿಗೂ ಮುಕ್ತ ಅವಕಾಶ ಕಲ್ಪಿಸಿದ್ದಾರೆ. ಯಾರಾದರೂ
ಕಲ್ಲಿನ ಗಾಣದ ಘಟಕವನ್ನು ಸ್ಥಾಪಿಸಲಿಚ್ಚಿಸಿದರೆ ಎಲ್ಲರೀತಿಯ ಸಹಾಯ ಮಾಡುತ್ತಾರೆ ಹೇಮಂತ್.
ಪ್ರಾಯಶ್ಚಿತಕ್ಕಾಗಿ ಮರ ಬೆಳೆಸಲು ಹೊರಟ ಹೇಮಂತ್ ರವರು ಇಂದು ಸಾವಯವ ಕೃಷಿ, ಎತ್ತಿನ ಗಾಣ, ಮಾರಾಟ ಮಳಿಗೆ ಸ್ಥಾಪಿಸಿ ಹಲವರಿಗೆ ದಾರಿದೀಪವಾಗಿದ್ದಾರೆ. ಇವರಲ್ಲವೇ ಯುವ ಜನರಿಗೆ ಸ್ಫೂರ್ತಿ
ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ 9964586167